ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕ. ವಿ. ಪರಿಷತ್ತು ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 24/9/22

# ಗಂಗಾಕಲ್ಯಾಣದಲ್ಲಿ ಅವ್ಯವಹಾರ ತನಿಖೆಗೆ ಸದನ ಸಮಿತಿ: ನಿರ್ಧಾರ

ವಿಧಾನ ಪರಿಷತ್ತು: ಮಹತ್ವಾಕಾಂಕ್ಷಿ 'ಗಂಗಾ ಕಲ್ಯಾಣ' ಯೋಜನೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ ತನಿಖೆಗೆ ಸಂಬಂಧಿಸಿದಂತೆ ಮೇಲ್ಮನೆ ಸದನ ಸಮಿತಿ ರಚಿಸಲು ಸರ್ಕಾರ ನಿರ್ಧರಿಸಿದೆ.

ಬುಧವಾರ ನಿಯಮ 72ರಡಿ ಬಿಜೆಪಿ ಸದಸ್ಯ ವೈ.ಎ. ನಾರಾಯಣಸ್ವಾಮಿ ಪ್ರಸ್ತಾಪಿಸಿದ ವಿಷಯಕ್ಕೆ ಪ್ರತಿಕ್ರಿಯಿಸಿದ ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ, 'ಯೋಜನೆಯಲ್ಲಿ ಅವ್ಯವಹಾರದ ನಡೆದಿದ್ದು ತನಿಖೆಗೆ ಸದನ ಸಮಿತಿ ರಚಿಸುವಂತೆ ಸದಸ್ಯರಿಂದ ಒಕ್ಕೊರಲ ದನಿ ಕೇಳಿಬಂದಿದೆ. ಇದಕ್ಕೆ ಸರ್ಕಾರದ ಸಹಮತ ಇದ್ದು, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರೊಂದಿಗೆ ಚರ್ಚಿಸಿ, ಈ ಸಮಿತಿಯಲ್ಲಿ ಯಾರ್‍ಯಾರು ಇರಲಿದ್ದಾರೆ ಎಂಬುದನ್ನು ಸದನದ ಗಮನಕ್ಕೆ ತರಲಾಗುವುದು' ಎಂದು ಹೇಳಿದರು.

ಇದಕ್ಕೂ ಮುನ್ನ ಮಾತನಾಡಿದ ವೈ.ಎ. ನಾರಾಯಣಸ್ವಾಮಿ, 2015-16ರಿಂದ 2019-20ರ ಅವಧಿಯಲ್ಲಿ ರಾಜ್ಯದಲ್ಲಿ 31,735 ಕೊಳವೆಬಾವಿಗಳು ಅನುಮೋದನೆಗೊಂಡಿವೆ. ಇದರಲ್ಲಿ 224 ಕೋಟಿ ವೆಚ್ಚದಲ್ಲಿ 6,400 ಸಚಿವರು ಮತ್ತು ಯೋಜನೆ ಅಡಿ ಬರುವ ಏಳು ನಿಗಮಗಳ ಮಂಡಳಿಯ ವಿವೇಚನಾ ಕೋಟಾದಡಿ ಕೊರೆಯಲಾಗಿದೆ. ಈ ಪೈಕಿ 2,349 ಕೊಳವೆಬಾವಿಗಳು ಚಿತ್ರದುರ್ಗದ ಹೊಳಲ್ಕೆರೆ ತಾಲೂಕೊಂದರಲ್ಲೆ ಮಂಜೂರಾಗಿವೆ. ಬಹುತೇಕ ಪ್ರಕರಣಗಳಲ್ಲಿ ಗುತ್ತಿಗೆ ನಿಯಮಗಳನ್ನು ಗಾಳಿಗೆ ತೂರಲಾಗಿದ್ದು ನಿಜವಾದ ಫಲಾನುಭವಿಗಳಿಗೆ ಯೋಜನೆ ತಲುಪಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸದಸ್ಯ ಮರಿತಿಬ್ಬೇಗೌಡ ಮಾತನಾಡಿ, ಗಂಗಾ ಕಲ್ಯಾಣ ಅಡಿ ಕೊರೆಯಲಾದ ಯಾವೊಂದು ಕೊಳವೆಬಾವಿಯಲ್ಲೂ ನಿಯಮ ಪಾಲನೆ ಆಗಿಲ್ಲ. ಈ ಹಿನ್ನೆಲೆಯಲ್ಲಿ ಸದನ ಸಮಿತಿ ಮೂಲಕ ಸಮಗ್ರ ತನಿಖೆ ಅವಶ್ಯಕತೆ ಇದೆ ಎಂದು ಹೇಳಿದರು. ಪ್ರತಿಪಕ್ಷ ನಾಯಕ ಎಸ್. ಆರ್. ಪಾಟೀಲ್, ಸದಸ್ಯರಾದ ತೇಜಸ್ವಿನಿಗೌಡ, ರವಿಕುಮಾರ್, ಬಸವರಾಜ ಇಟಗಿ ಮತ್ತಿತರರು ಇದನ್ನು ಬೆಂಬಲಿಸಿದರು.